SC No. 245/2023
PW.-7

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್.ಸಿ. 245/2023**

| | | |
|---|---|---|
| ಸಾಕ್ಷಿದಾರರ ಹೆಸರು | ದೊರೆಸ್ವಾಮಿ | ಪ್ರಮಾಣ ವಚನ ಮಾಡಿದ ದಿನಾಂಕ: **09.09.2025** |
| ತಂದೆಯ/ಗಂಡನ ಹೆಸರು | ರಮೇಶ್ | |
| ವಯಸ್ಸು | 35 ವರ್ಷ | |
| ವೃತ್ತಿ | ಫ್ಯಾಕ್ಟರಿ ಕೆಲಸ | ಪ್ರಾ.ಸಾಃ 13 |
| ವಾಸ ಸ್ಥಳ | ಕುಂಬಾರಕೊಪ್ಪಲು, ಮೈಸೂರು | ಚಾ.ಸಾಃ 07 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಕಳೆದ 5-6 ವರ್ಷಗಳಿಂದ ಜೆ.ಕೆ. ಟೈರ್ಸ್‌ನಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ಚಾಸಾ-1 ಗೊತ್ತು. ಅವರು ಮತ್ತು ನಾನು ಅಕ್ಕಪಕ್ಕದ ಮನೆಯ ವಾಸಿಗಳು ಇರುತ್ತೇವೆ. ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿರುತ್ತೇನೆ. ದಿನಾಂಕ 14.03.2023 ರಂದು ರಾತ್ರಿ 8.40 ಗಂಟೆಗೆ ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಾ ಇದ್ದೆ ನನ್ನ ಸ್ನೇಹಿತ ಫ್ಯಾಕ್ಟರಿ ಹುಡುಗ ಅರುಣ ಸಿಕ್ಕಿದ್ದ ಆತನೊಂದಿಗೆ ಮಾತನಾಡುತ್ತಾ ಇದ್ದೆ. ನಾವುಗಳು ಚಂದನ್ ಮನೆಯ ಹತ್ತಿರ ಬೋರ್ ವೆಲ್ ಹತ್ತಿರ ಮಾತನಾಡುತ್ತಾ ನಿಂತಿದ್ದೆವು. ಆಗ ಚಂದನ್ ಮತ್ತು ಅವರ ತಂದೆ ಹಿಡಿದುಕೊಳ್ಳಿ ಹಿಡಿದುಕೊಳ್ಳಿ ಎಂದು ಬರುತ್ತಾ ಇದ್ದರು. ನ್ಯಾಯಾಲಯದ ಮುಂದೆ ಹಾಜರಿರುವ

ಆರೋಪಿ ಹಸಿರು ಷರ್ಟ್ ಮತ್ತು ಜೀನ್ಸ್ ಪ್ಯಾಂಟ್ ಹಾಕಿಕೊಂಡು ಕೈಯಲ್ಲಿ ಚಾಕು ನಾನು ಪುನಃ ಹೇಳುವುದೇನೆಂದರೆ ಡ್ರಾಗರ್ ಹಿಡಿದುಕೊಂಡು ಚಂದು ಮನೆಯ ಕಡೆಯಿಂದ ರಾಮಮಂದಿರ ಕಡೆಗೆ ಓಡಿ ಹೋಗಿ ಅಲ್ಲಿ ಮಿಸ್ ಆಗಿದ್ದ. ನಾವು ಸಹ ಆರೋಪಿತನನ್ನು ಹಿಡಿದುಕೊಳ್ಳಲು ಪ್ರಯತ್ನ ಪಟ್ಟೆವು ಸಿಕ್ಕಿರಲಿಲ್ಲ. ನಾನು ಚಂದನ್ ರವರ ಅಣ್ಣ ಚೇತನ್ ರವರಿಗೆ ಚಂದನ್ ಗೆ ಎಡಗಡೆ ಬೆನ್ನ ಮೇಲೆ ಏಟಾಗಿದೆ ಬಾ ಅಂತ ಫೋನ್ ಮಾಡಿದ್ದೆ. ರಾಮಮಂದಿರ ಹತ್ತಿರ ಆರೋಪಿತನು ಮಿಸ್ ಆದಾಗ ಚಂದನ್ ಅವರನ್ನು ನೋಡಿದೆ ಎಡ ಬೆನ್ನಿಂದ ರಕ್ತ ಬರುತ್ತಿತ್ತು. ಆಗ ಚೇತನ್ ಬಂದಿದ್ದ. ಚಂದನ್ ಅನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ. ನನಗೆ ಡ್ರಾಗರ್, ಷರ್ಟು ಮತ್ತು ಜೀನ್ಸ್ ಪ್ಯಾಂಟ್ ಅನ್ನು ನೋಡಿದರೆ ಈಗ ಗುರುತಿಸಲು ಆಗುವುದಿಲ್ಲ.

<u>**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**</u>

ಪೊಲೀಸರು ನನಗೆ ಲಿಖಿತವಾಗಿ ನೋಟೀಸ್ ಕೊಟ್ಟಿರುವುದಿಲ್ಲ. ದಿನಾಂಕ 14.03.2023 ರಂದು ದೂರನ್ನು ನಾನು ಕೊಟ್ಟಿರುವುದಿಲ್ಲ ಆದರೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ. ಸಹಿ ಮಾಡಿದಂತಹ ದಾಖಲೆಯಲ್ಲಿ ಪೊಲೀಸರು ಏನು ಬರೆದಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಹೇಳಿಕೆಯಲ್ಲಿ ಅರುಣ್ ಎಂಬವರು ನನ್ನ ಜೊತೆಯಲ್ಲಿ ಆ ದಿನ ಇದ್ದರು ಎನ್ನುವ ಬಗ್ಗೆ ಹೇಳಿ ಬರೆಸಿರುವುದಿಲ್ಲ. ನಾನು ಆ ದಿನ ಫ್ಯಾಕ್ಟರಿಯಲ್ಲಿ ಒಟಿ ಕೆಲಸ ಮಾಡುತ್ತಿದ್ದೆ ಎನ್ನುವ ಬಗ್ಗೆ ಪೊಲೀಸರಿಗೆ ದಾಖಲೆ ಕೊಟ್ಟಿರುವುದಿಲ್ಲ. ನಾನು ಜೆ.ಕೆ. ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆ ಎನ್ನುವ ಬಗ್ಗೆ

ಪೊಲೀಸರಿಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. ಆ ದಿನ ನನ್ನ ಸ್ನೇಹಿತ ಅರುಣ್ ನನ್ನ ಜೊತೆಯಲ್ಲಿ ಓಡಿ ಬಂದಿರಲಿಲ್ಲ. ನಾನು ಈ ವಿಷಯವನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ನಿಂತಿದ್ದೆ ಎಂದು ಹೇಳುವ ಸ್ಥಳದಿಂದ ಓಡಿ ಹೋಗುತ್ತಿದ್ದ ಎಂದು ಹೇಳುವ ಸ್ಥಳಕ್ಕೆ 2–3 ಕಿ.ಮೀಟರ್ ಅಂತರ ಇತ್ತು. ಆ ದಿನ ಕತ್ತಲೆ ಇತ್ತು. 2 ಕಿ.ಮೀಟರ್ ಅಂತರದಲ್ಲಿ ಓಡುತ್ತಿರುವ ವ್ಯಕ್ತಿಯ ಚಹರೆ ಗೊತ್ತಾಗುವುದಿಲ್ಲ ಎಂದರೆ ಸರಿ. ಆದರೆ ಫೋಕಸ್ ಲೈಟ್ ಇರುವ ಕಡೆ ಓಡಿ ಹೋಗಿ ನೋಡಿದಾಗ ಆತ ಕಂಡು ಬಂದಿದ್ದ. ನಾವು ಆ ದಿನ 5–6 ಜನ ಆರೋಪಿತನನ್ನು ಹಿಡಿಯಲು ಪ್ರಯತ್ನ ಪಟ್ಟಿದ್ದೆವು. 2–3 ಕಿ.ಮೀಟರ್ ಅಂತರದಲ್ಲಿ ಒಬ್ಬ ವ್ಯಕ್ತಿ ಕೈಯಲ್ಲಿ ಚಾಕು ಹಿಡಿದುಕೊಂಡಾಗ ಆ ಚಾಕು ಎಷ್ಟು ಉದ್ದ ಇರುತ್ತದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. 2–3 ಕಿ.ಮೀಟರ್ ಅಂತರದಲ್ಲಿ ಇರುವ ವ್ಯಕ್ತಿ ಕೈಯಲ್ಲಿ ಚಾಕು ಹಿಡಿದುಕೊಂಡಿರುತ್ತಾರೋ ಅಥವಾ ದೊಣ್ಣೆ ಹಿಡಿದುಕೊಂಡಿರುತ್ತಾರೋ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ಆ ದಿನ ಬೇರೊಬ್ಬ ವ್ಯಕ್ತಿ ಮುಮ್ಮುಖವಾಗಿ ಓಡುತ್ತಿದ್ದರಿಂದ ಆತನ ಮುಖವನ್ನು ನಾನು ನೋಡಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನೇ ಓಡಿ ಹೋಗುತ್ತಿದ್ದ ಆಗಾಗ್ಗೆ ಹಿಂದಕ್ಕೆ ತಿರುಗುತ್ತಿದ್ದ ಆದ್ದರಿಂದ ಮುಖವನ್ನು ನೋಡಿದ್ದೆನು. ಘಟನಾ ಸ್ಥಳದಲ್ಲಿ ರಾತ್ರಿ 9.30 ಗಂಟೆಯವರೆಗೆ ಇದ್ದೆ. ನನ್ನ ಮೊಬೈಲ್ ಅನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಚೇತನ್ ರವರು

ರಾತ್ರಿ 9.25 ನಿಮಿಷಕ್ಕೆ ಬಂದಿದ್ದರು. ನಾನು ರಾತ್ರಿ 9.20 ಗಂಟೆಗೆ ಫೋನ್ ಮಾಡಿದ್ದೆ. ನಾನು ಆ ದಿನ ಆರೋಪಿತನು ಹಾಕಿದ್ದ ಎಂದು ಹೇಳುವ ಷರ್ಟು ಅರ್ಧ ತೋಳಿನ ಷರ್ಟೋ ಅಥವಾ ತುಂಬು ತೋಳಿನ ಷರ್ಟು ಎಂದು ಹೇಳಿರುವುದಿಲ್ಲ. ಆ ದಿನ ಆರೋಪಿತನು ಹಾಕಿದ್ದ ಜೀನ್ಸ್ ಪ್ಯಾಂಟ್ ನೀಲಿ ಬಣ್ಣದು ಇತ್ತು ಆ ನೀಲಿ ಬಣ್ಣ ಆಕಾಶದ ನೀಲಿ ಬಣ್ಣ ಇರಲಿಲ್ಲ, ಲೈಟ್ ನೀಲಿ ಬಣ್ಣ ಇತ್ತು. ನೀಲಿ ಬಣ್ಣದ ಮತ್ತು ಹಸಿರು ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಷರ್ಟು ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಚಂದನ್ ನ ಎಡ ಬುಜದಲ್ಲಿ ಒಂದು ಕಡೆ ರಕ್ತ ಬರುತ್ತಿತ್ತು. ಚೇತನ್ ಸ್ಥಳಕ್ಕೆ ಬಂದ ಮೇಲೆ 10 ನಿಮಿಷದ ವರೆಗೆ ಮಾತನಾಡುತ್ತಿದ್ದೆವು. ಚಂದನ್ ಅವರನ್ನು ಅವರ ಅಣ್ಣ ಚೇತನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ನನ್ನ ಹೇಳಿಕೆಯಲ್ಲಿ ಆಗಲೀ ನನ್ನ ಮುಖ್ಯ ವಿಚಾರಣೆಯಲ್ಲಿಯಾಗಲೀ ಚೇತನ್ ಚಂದನ್ ಅವರನ್ನು ಯಾವ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ನನಗೆ ಘಟನೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಚೇತನ್ ಮತ್ತು ಚಂದನ್ ರವರು ಸ್ನೇಹಿತರು ಇರುವುದರಿಂದ ಅವರಿಗೆ ಅನುಕೂಲವಾಗಲೀ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದನ್ನು ಹೊರತುಪಡಿಸಿದರೆ ಬೇರೆ ಏನನ್ನು ಪೊಲೀಸರ ಮುಂದೆ ಹೇಳಿರುವುದಿಲ್ಲ.

**<u>ಮರವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.